ದಿನಾಂಕ 10-06-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲು 9ನೇ ಪ್ರತಿವಾದಿ ಪರ ಶ್ರೀ ಪಿ ಕೆ ವಕೀಲರಿಂದಃ-</u>

ವಾದಿ ನನ್ನ ಅಕ್ಕ ಎಂದರೆ ಸರಿ. ವಾದಿ ನನ್ನ ತಾತನ ಆಸ್ತಿ ಯಲ್ಲಿ ಭಾಗ ಕೇಳಿ ಸಲ್ಲಿಸಿದ್ದಾರೆ. ದಾವಾ ಸ್ವತ್ತುಗಳ ಸ.ನಂ ನೆನಪಿಲ್ಲ, ವಿಸ್ತೀರ್ಣ 7 ರಿಂದ 8 ಎಕರೆ ಇದೆ. ಯಾವ ಯಾವ ಸ.ನಂಗಳಲ್ಲಿ ಎಷ್ಟು ಎಷ್ಟು ವಿಸ್ತೀರ್ಣ ಇದೆ ಎಂದು ಗೊತ್ತಿಲ್ಲ. ದಾವ ಸ್ವತ್ತುಗಳ ಚಕ್ಕು ಬಂದಿ ಗೊತ್ತಿಲ್ಲ. ನಾನು ಚೌಕಹಳ್ಳಿ ಗ್ರಾಮದಲ್ಲಿ ವಾಸ ಇಲ್ಲ. ವಾದಿ ಬಿಡದಿ ಯಲ್ಲಿ ವಾಸ. ನನ್ನ ತಂದೆ ಅಣ್ಣ ಈಗ ಬಿಡದಿ ಯಲ್ಲಿ ವಾಸ. ನನ್ನ ತಂದೆ ಚಿಕ್ಕಪ್ಪ ಎಲ್ಲರು ಈಗ ಒಂದೇ ಮನೆಯಲ್ಲಿ ವಾಸ ಇಲ್ಲ, ನಾವೆಲ್ಲ 15-20 ವರ್ಷಗಳಿಂದ ಬೇರೆ ಬೇರೆ ವಾಸ ಇದ್ದೆವೆ ಅಂದರೆ ಸರಿಯಲ್ಲ. ನನ್ನ ಮದುವೆ ಆಗಿ 12 ರಿಂದ 13 ವರ್ಷ ಆಗಿದೆ ನನ್ನ ಮದುವೆ 2007ರಲ್ಲಿ ಆಗಿದೆ. ದಾವ ಐಟಂ 2 ರ ಖಾತೆ ಯಾರ ಹೆಸರಿನಲ್ಲಿ ಇದೆ ಎಂದು ಗೊತ್ತಿಲ್ಲ. ನಿಪಿ 4 ರ ಪ್ರಕಾರ ದಾವ ಐಟಂ 2ರ ಖಾತೆ 2009-2010 ರಲ್ಲಿ ನನ್ನ ತಂದೆ ಹೆಸರಿನಲ್ಲಿ ಇತ್ತು ಎಂದರೆ ಸರಿ. ನಿಪಿ 4ರಲ್ಲಿ ನನ್ನ ತಂದೆಗೆ 1985-1986ರಲ್ಲಿ ಕ್ರಯ ಆಗಿದೆ ಎಂದು ನಮೂದು ಇದೆ ಎಂದರೆ ಸುಳ್ಳು ಎಂದು ನುಡಿಯುುತ್ತಾರೆ,, ಕ್ರಯ ಎಂದು ನಮೂದು ಆಗಿರುವುದು ಗೊತ್ತಿದ್ದು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದಿದೇನೆ ಎಂದರೆ ಸರಿಯಲ್ಲ. ನಿಪಿ 16ರ ಪ್ರಕಾರ ನಾನು ನನ್ನ ತಂದೆ ತಾಯಿ ನನ್ನ ಅಣ್ಣ ಎಲ್ಲ ಸೇರಿ 9 ನೇ ಪ್ರತಿವಾದಿಗೆ ಮಾರಾಟ ಮಾಡಿದ್ವೇವೆ ಅಂದರೆ ಸರಿಯಲ್ಲ. ಅದರಲ್ಲಿ ನಿಮ್ಮ ಪೋಟೋ ಇದೆ ಅಂದರೆ ಸಾಕ್ಷಿ ಇದೆ ಎಂದು ನುಡಿಯುುತ್ತಾರೆ. ನಿಪಿ 16ರಲ್ಲಿ ಇರುವ ಸಹಿ ನನ್ನದಲ್ಲ. ನಿಪಿ 16ರಲ್ಲಿ ಸ್ವಯರ್ಜಿತವಾಗಿ ಬಂದ ಸ್ವತ್ತು ಎಂದು ನಮೂದು ಆಗಿದೆ ಎಂದರೆ ಗೊತೀಲ್ಲ. ನಿಪಿ 16 ರಲ್ಲಿ ನನ್ನ ಮದುವೆಗೆ ಮಾಡಿದ ಸಾಲ ತೀರಿಸಲು ಮತ್ತು ಕುಟುಂಬ ಪೋಷಣೆ ಮತ್ತು ಕೈಸಾಲ ತೀರಿಸಲು ಸ್ವತ್ತನ್ನು ಮಾರಾಟ ಮಾಡಲಾಗುತ್ತಿದೆ ಎಂದು ಬರೆದಿದೆ ಎಂದರೆ ಸರಿ ಅಲ್ಲ. ಕ್ರಯಪತ್ರದಂತೆ 9ನೇ ಪ್ರತಿವಾದಿ ಹೆಸರಿಗೆ ಖಾತೆ ಆಗಿದೆ ಎಂದರೆ ಸುಳ್ಳು. ದಾವಾ

ಐಟಂ 2ರಲ್ಲಿ 9ನೇ ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದಾರೆ ಅಂದರೆ ಸಾಕ್ಷಿ ಈಗ ಸದ್ಯಕ್ಕೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

ಐಟಂ ನಂ 3 ರ ಖಾತೆ ಯಾರ ಹೆಸರಿಗೆ ಬರುತ್ತಿದೆ ಎಂದು ಗೊತ್ತಿಲ್ಲ, ದಾವ ಐಟಂ ನಂ 3ರ ಸಂಬಂದ ಮಾರನೇ ದಿನ ನಿಮ್ಮ ಅಜ್ಜಿ ತಂದೆ ಚಿಕ್ಕಪ್ಪಂದಿರು 9ನೇ ಪ್ರತಿವಾದಿಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿದಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಾವ ಐಟಂ ನಂ 3 ಮೂಲತಹ ಯಾರಿಗೆ ಸೇರಿದ್ದು ಎಂದು ಗೊತ್ತಿಲ್ಲ. ಸದರಿ ಸ್ವತ್ತಿನ ಖಾತೆ 2009-10ರಲ್ಲಿ ನಮ್ಮ ಅಜ್ಜಿಯ ಹೆಸರಿನಲ್ಲಿ ಬರುತ್ತಿತ್ತು ಅಂದರೆ ಇರಬಹುದು ಎಂದು ನುಡಿಯುತ್ತಾರೆ.

ದಾವ ಐಟಂ ನಂ 3 ನನ್ನ ತಾತ ನ ಹೆಸರಿನಲ್ಲಿ ಇದ್ದ ಬಗ್ಗೆ ದಾಖಲೆ ನನ್ನ ಅಕ್ಕ ಹಾಜರು ಪಡಿಸಿದ್ದಾರೆ. ನಿಡಿ 2 ರಲ್ಲಿ ಮಾಡಿರುವ ಕೈಸಾಲ ತೀರಿಸಲು ಸಂಸಾರ ಪೋಷಣೆ ಗಾಗಿ, ನಮಗೆ ಹಣದ ಅವಶ್ಯಕತೆ ಇರುವುದರಿಂದ ಮಾರಾಟ ಮಾಡುತ್ತಿದೆವೆ ಎಂದು ಒಕ್ಕಣೆ ಇದೆ ಎಂದರೆ ಸುಳ್ಳು. 9ನೇ ಪ್ರತಿವಾದಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ನನ್ನ ಅಜ್ಜಿ ತಂದೆ ಚಿಕ್ಕಪಂದಿರ ವಿರುದ್ದವಾಗಿ ಡಿಕ್ರಿ ಮಾಡಿಸಿಕೊಂಡಿದ್ದಾರೆ ಎಂದರೆ ಸುಳ್ಳು. ದಾವ ಐಟಂ ನಂ 2 ಮತ್ತು 3 ಅನ್ನು ನನ್ನ ಮದುವೆಗೆ ಮಾಡಿದ ಸಾಲ ತೀರಿಸುವ ಸಲುವಾಗಿ ಹಾಗೂ ಕೈ ಸಾಲ ತೀರಿಸುವ ಸಲುವಾಗಿ ಮಾರಾಟ ಮಾಡಲಾಗಿದೆ ಹಾಗೂ ಅಗ್ರಿಮೆಂಟ್ ಮಾಡಲಾಗಿತ್ತು ಎಂದರೆ ಸರಿಯಲ್ಲ. 9ನೇ ಪ್ರತಿವಾದಿ ಏನು ಲಿಖಿತ ಹೇಳಿಕೆ ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ, ನನ್ನ ಮದುವೆಯು ಆಹ್ವಾನ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಕಾರಣ ಮದುವೆ ದೇವಸ್ಥಾನ ದಲ್ಲಿ ಆಯಿತು. ನನ್ನ ಮದುವೆ 2009 ರಲ್ಲಿ ಆಗಿದ್ದರು ಸಹ 9ನೇ ಪ್ರತಿವಾದಿಗೆ ಆಸ್ತಿ ಕೊಡಬೇಕಾಗುತ್ತೆ ಎಂಬ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, 9ನೇ ಪ್ರತಿವಾದಿ ನ್ಯಾಯಾಬದ್ದವಾಗಿ ಕ್ರಯಪತ್ರ ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.